


ದೇಶಗಳಿಂದ ಬಂಡವಾಳ ಹೂಡಿಕೆ, ವಸ್ತುಗಳು ಹರಿದುಬರುತ್ತದೆ. ಪ್ರತಿ ದೇಶವು ಅಮೆರಿಕನ್ ಡಾಲರ್ ಹೊಂದಲು ಇಚ್ಛೆಪಡುತ್ತದೆ. ಇದರಿಂದಾಗಿ ಪ್ರಪಂಚದ ವಿದೇಶಿ ವ್ಯಾಪಾರದಲ್ಲಿ ಶೇ. 89ರಷ್ಟು ಅಮೆರಿಕನ್ ಡಾಲರ್ ಬಳಕೆಯಾಗುತ್ತಿದೆ. ಪ್ರತಿ ದೇಶವು ಅಮೆರಿಕನ್ ಡಾಲರ್‌ನಲ್ಲಿ ತನ್ನ ರಿಸರ್ವ್ ಇಡಲು ಇಷ್ಟಪಡುತ್ತದೆ. ಭಾರತ ಕೂಡ $ 630 ಬಿಲಿಯನ್ ರಿಸರ್ವ್ ಹೊಂದಿದೆ.

2023 ಜನವರಿಯಲ್ಲಿ ಒಂದು ಡಾಲರ್‌ಗೆ ಭಾರತದ ರೂಪಾಯಿ 81.78 ಇದ್ದದ್ದು 2025 ಜನವರಿಯಲ್ಲಿ 86.50 ಆಗಿದೆ. ಅಂದರೆ ರೂಪಾಯಿ ತನ್ನ ಮೌಲ್ಯ, ಡಾಲರ್ ಎದುರು ಕಳೆದುಕೊಂಡಿದೆ. ಇದಕ್ಕೆ ಮುಖ್ಯ ಕಾರಣಗಳನ್ನು ಕೆಳಗಿನಂತೆ ವಿಶ್ಲೇಷಿಸಬಹುದು:

- ಭಾರತ ತನ್ನ ಉಪಯೋಗದ ಶೇ. 80ರಷ್ಟು ಕಚ್ಚಾ ತೈಲ ಆಮದು ಮಾಡಿಕೊಳ್ಳುತ್ತದೆ. ಕಚ್ಚಾ ತೈಲದ ಬೆಲೆ ಈಗ ಏರುತ್ತಿದ್ದು, ಒಂದು ಬ್ಯಾರೆಲ್‌ಗೆ $ 80.12 ಆಗಿದೆ.
- ವಿದೇಶಿ ಸಂಸ್ಥೆಗಳು ಭಾರತದ ಮಾರುಕಟ್ಟೆಯಿಂದ ಹಣ ಹಿಂತಿರುಗಿ ಪಡೆಯುತ್ತಿವೆ. ಕಳೆದ ವರ್ಷ 1.19 ಲಕ್ಷ ಕೋಟಿ ರೂಪಾಯಿ ಹೂಡಿಕೆಯನ್ನು ಷೇರು ಮಾರುಕಟ್ಟೆಯಿಂದ ಹಿಂಪಡೆಯಲಾಗಿದೆ.
- ಭಾರತದಲ್ಲಿ ಹಣದುಬ್ಬರ ಹೆಚ್ಚಾಗಿ, ಪ್ರತಿಯೊಂದು ವಸ್ತುವಿನ ಬೆಲೆ ಏರುತ್ತಿದೆ. ರೂಪಾಯಿಗೆ ಕೊಂಡುಕೊಳ್ಳುವ ಶಕ್ತಿ ಕುಗ್ಗುತ್ತಿದೆ.
- ಭಾರತದ ಜಿಡಿಪಿ 2004ರಿಂದ 2014ರವರೆಗೆ ಸರಾಸರಿ ಶೇ. 8 ಇದ್ದದ್ದು ಇಳಿಮುಖವಾಗಿದೆ.
- ಭಾರತದಲ್ಲಿ ದ್ರವ್ಯತೆಯನ್ನು (ಲಿಕ್ವಿಡಿಟಿ) ತುಂಬಲು ಆರ್‌ಬಿಐ ದೈನಂದಿನ ವಿಆರ್‌ಆರ್ ಹರಾಜುಗಳನ್ನು ನಡೆಸಲಿದೆ. ಭಾರತದ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿನ ದ್ರವ್ಯತೆಯ ಕೊರತೆ ಎರಡು ಟ್ರಿಲಿಯನ್ ರೂಪಾಯಿಗಳನ್ನು ಮೀರಿದೆ.
- ಭಾರತೀಯ ಬ್ಯಾಂಕುಗಳಲ್ಲಿ ಠೇವಣಿ ಸಂಗ್ರಹಕ್ಕಿಂತ ಸಾಲ ನೀಡುವಿಕೆ ಹೆಚ್ಚಾಗಿದ್ದು, ಅನುಪಾತ ಉತ್ತಮವಾಗಿಲ್ಲ.
- ಭಾರತದ ರಫ್ತು ಕಳೆದ ವರ್ಷಕ್ಕಿಂತ ಶೇ. 0.99 ಕಡಿಮೆಯಾಗಿದೆ. ರಫ್ತು $ 38.01 ಬಿಲಿಯನ್ ಇದ್ದರೆ, ಆಮದು ಶೇ. 5ರಷ್ಟು ಹೆಚ್ಚಾಗಿ $ 59.95 ಬಿಲಿಯನ್ ಆಗಿದೆ. ಅದರಿಂದ ರಫ್ತು ಮತ್ತು ಆಮದಿನ ಅಂತರ $ 22 ಬಿಲಿಯನ್ ಆಗಿದೆ. ಏಪ್ರಿಲ್ 2024ರಿಂದ ಡಿಸೆಂಬರ್ 2024ರವರೆಗೆ ವ್ಯಾಪಾರ ಕೊರತೆ ಡಾಲರ್ 210.77 ಬಿಲಿಯನ್ ಆಗಿದೆ. ಇದೇ ವೇಳೆಯಲ್ಲಿ ಚೀನಾ ದೇಶದಲ್ಲಿ ರಫ್ತು, ಆಮದಿಗಿಂತ 1000 ಬಿಲಿಯನ್ ಹೆಚ್ಚಿದೆ.

**ರೂಪಾಯಿ ಅಪಮೌಲ್ಯದಿಂದ ಏನಾಗುತ್ತದೆ?**

- ಭಾರತದ ರೂಪಾಯಿ ಬೆಲೆ ಕಳೆದುಕೊಳ್ಳುವುದರಿಂದ ಪರದೇಶಗಳಿಗೆ ಕಡಿಮೆ ಡಾಲರಿನಲ್ಲಿ ಭಾರತದ ವಸ್ತುಗಳು ಅಗ್ಗವಾಗಿ ದೊರೆಯುತ್ತವೆ.
- ಭಾರತೀಯರಿಗೆ ಸಂಪಾದನೆ ಹೆಚ್ಚಾದರೂ, ವಸ್ತುಗಳು ದುಬಾರಿಯಾಗುತ್ತವೆ. ಹತ್ತು ವರ್ಷದ ಹಿಂದೆ 8 ಲಕ್ಷ ರೂಪಾಯಿ ಇದ್ದ ಕಾರು ಇಂದು 13 ಲಕ್ಷ ರೂಪಾಯಿ ಎಂದಿಟ್ಟುಕೊಂಡರೆ, ರೂಪಾಯಿ ಲೆಕ್ಕದಲ್ಲಿ ಶೇ. 62.5ರಷ್ಟು ಬೆಲೆ ಏರಿದೆ ಎಂದು ಅರ್ಥ. ಆದರೆ ಡಾಲರ್ ಲೆಕ್ಕದಲ್ಲಿ ಅಂದು 12,700 ಇದ್ದದ್ದು ಇಂದು 15,100 ಡಾಲರ್ ಆಗಿದೆ. ಡಾಲರ್‌ನಲ್ಲಿ ಕೇವಲ ಶೇ. 19ರಷ್ಟು ಬೆಲೆ ಏರಿಕೆಯಾಗಿದೆ.
- ಪೆಟ್ರೋಲ್ ಬೆಲೆ ಏರಿದಾಗ ಸಾಗಾಣಿಕೆಯ ವೆಚ್ಚ ಏರಿ, ಎಲ್ಲಾ ವಸ್ತುಗಳೂ ದುಬಾರಿಯಾಗುತ್ತದೆ.

ರೂಪಾಯಿ ತನ್ನ ಬೆಲೆ ಕಳೆದುಕೊಳ್ಳುವುದರಿಂದ ನಮಗೆ ಆಮದು ಬಹಳ ದುಬಾರಿಯಾಗುತ್ತವೆ. ಇದರ ಪರಿಣಾಮ ನಮ್ಮ ಅರ್ಥ ವ್ಯವಸ್ಥೆಯ ಮೇಲಾಗುತ್ತದೆ.

ದೇಶದ ಉತ್ಪಾದನೆ (ಜಿಡಿಪಿ) ಉತ್ತಮವಾಗಿದ್ದು, ಉದ್ಯೋಗ ಸೃಷ್ಟಿ ಹೆಚ್ಚಿದ್ದು, ಹಣದುಬ್ಬರ ಕಡಿಮೆ ಇದ್ದು, ದೇಶದ ಕರೆನ್ಸಿ ಬೆಲೆ ಉತ್ತಮವಾಗಿದ್ದು, ಜನರಲ್ಲಿ ಸಂತಸ ಭಾವನೆ ಇದ್ದರೆ, ದೇಶದ ಪ್ರಗತಿ ಸಾಧ್ಯವಾಗುತ್ತದೆ. ಆಗ ಪರದೇಶಗಳಿಂದ ಬಂಡವಾಳದ ಹೊಳೆ ಹರಿಯುತ್ತದೆ. ದೇಶ ಪಡೆದ ಸಾಲದ ಪ್ರಮಾಣ ಕಡಿಮೆಯಾಗುತ್ತದೆ. ತೆರಿಗೆ ಹೊರೆ ಎನಿಸುವಂತಿರುವುದಿಲ್ಲ. ಶಿಕ್ಷಣ ಮತ್ತು ಆರೋಗ್ಯ ಎಲ್ಲರಿಗೂ ಎಟಕುವಂತಿರುತ್ತದೆ. ಜನರ ಜೀವನ ಮಟ್ಟ ಉತ್ತಮವಾಗಿರುತ್ತದೆ.

ಎಲ್ಲ ಉತ್ತಮ ಅಂಶಗಳೂ ಒಂದೇ ಸಮಯದಲ್ಲಿ, ಒಂದೇ ರಾಷ್ಟ್ರದಲ್ಲಿ ಇರುವುದು ಬಹಳ ಅಪರೂಪ. ಆದರೆ ದೇಶದ ಆರ್ಥಿಕತೆ ತೊಂದರೆಗೆ ಸಿಲುಕುವಂತೆ ಅನೇಕ ವಿಚಾರಗಳು ಇದ್ದರೆ ಆ ದೇಶದ ಕರೆನ್ಸಿಗೆ ಹೆಚ್ಚಿನ ಬೆಲೆ ಇರುವುದಿಲ್ಲ. ಭಾರತದಲ್ಲಿ ಹೆಚ್ಚಿನ ಪ್ರಗತಿಯಾಗಿ ರೂಪಾಯಿ ಬಲವರ್ಧನೆ ಆಗಲಿ ಎಂದು ಆಶಿಸೋಣ.

**ಪ್ರತಿಕ್ರಿಯಿಸಿ: feedback@sudha.co.in**